# ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

ಕರ್ನಾಟಕ ಸರ್ಕಾರ

ಇ-ಮೇಲ್:- **kscb.sd3tmk@gmail.com**

**ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ. ನಂ, 3ನೇ ಉಪ-ವಿಭಾಗ,**

**ಅರಳಿಮರದಪಾಳ್ಯದ ರಸ್ತೆ. ಡಿ.ನಂಜಪ್ಪ ಲೇಔಟ್, ಶಿರಾಗೇಟ್. ತುಮಕೂರು.**

**ದೂರವಾಣಿ ಸಂಖ್ಯೆ:- 0816-2273380**


# ಪರಿಚಯ

## ಮುನ್ನುಡಿ

ರಾಜ್ಯದ ನಗರ ಪ್ರದೇಶದಲ್ಲಿ ವಾಸಿಸುವ ಬಡಜನರ ಕೊಳಚೆ ನಿವಾಸಿಗಳ ಜೀವನಮಟ್ಟವು ಅತೀ ಕೆಳಮಟ್ಟದಲ್ಲಿರುವುದನ್ನು ಅರಿತು ಕರ್ನಾಟಕ ಸರ್ಕಾರವು ದಿನಾಂಕ: 01ನೇ ನವೆಂಬರ್ 1974 ರಲ್ಲಿ ಕರ್ನಾಟಕ ಕೊಳಚೆ ಪ್ರದೇಶ (ಅಭಿವೃದ್ಧಿ ಮತ್ತು ನಿರ್ಮೂಲನೆ) ಕಾಯಿದೆ 1973ನ್ನು ಜಾರಿಗೆ ತಂದಿದ್ದು, ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯನ್ನು 1975ರ ಜುಲೈನಲ್ಲಿ ಸ್ಥಾಪಿಸಲಾಯಿತು. ನಗರ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ನಿವಾಸಿಗಳು ಜೀವಿಸಲು ಯೋಗ್ಯವಲ್ಲದ ವಾತಾವರಣವಿದ್ದು, ಆರೋಗ್ಯ ಹಾಗೂ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿದ್ದು ಅವರ ಜೀವನಮಟ್ಟವನ್ನು ಸುಧಾರಿಸಲು ಸರ್ಕಾರವು ಕೊಳಚೆ ನಿವಾಸಿಗಳ ಅಭಿವೃದ್ಧಿಗಾಗಿ ಕರ್ನಾಟಕ ಮಂಡಳಿಯನ್ನು ಸ್ಥಾಪಿಸಿದೆ.

## ಮಂಡಳಿಯ ಸ್ಥಾಪನ

ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯು 1975ರಲ್ಲಿ ಸ್ಥಾಪನೆಯಾಗಿದ್ದು, ಮಂಡಳಿಯ ಹೆಸರನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಎಂದು 2010ರಲ್ಲಿ ಮರು ನಾಮಕರಣ ಮಾಡಲಾಗಿದೆ. ಮಂಡಳಿಯು 5 ಅಧಿಕಾರೇತರ ಸದಸ್ಯರು ಮತ್ತು 8 ಅಧಿಕಾರಿ ಸದಸ್ಯರುಗಳನ್ನು ಹೊಂದಿರುತ್ತದೆ. ಅಧ್ಯಕ್ಷರು ಮುಖ್ಯಸ್ಥರಾಗಿರುತ್ತಾರೆ. ಮಂಡಳಿ ಕಾಯಿದೆಯ ಕಲಂ 37ರ ಪ್ರಕಾರ ಮಂಡಳಿಯ ಆಯುಕ್ತರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದು, ಮಂಡಳಿ ಕಾಯಿದೆಯ ಮಾರ್ಗಸೂಚಿಗಳನ್ವಯ ಕಾರ್ಯನಿರ್ವಹಿಸಬೇಕಾಗಿರುತ್ತದೆ. ಕರ್ನಾಟಕ ಕೊಳಚೆ ಪ್ರದೇಶಗಳ (ಮೇಲ್ಪಾಟು ಮತ್ತು ನಿರ್ಮೂಲನ) ಅಧಿನಿಯಮ 1973 ಕಾಯಿದೆಗೆ 2002 ರಲ್ಲಿ ಕೆಲವು ತಿದ್ದುಪಡಿಗಳನ್ನು ಅಳವಡಿಸಲಾಗಿರುತ್ತದೆ ಮತ್ತು ನಿಯಮಗಳಿಗೆ ಕೆಲವು ತಿದ್ದುಪಡಿಗಳನ್ನು ರೂಪಿಸಿದ್ದು ಸರ್ಕಾರದ ಅಧಿಸೂಚನೆ ಸಂಖ್ಯೆ: ವ.ಇ.102:ಎಸ್.ಬಿ.ಎಂ:2002 ದಿನಾಂಕ: 18-10-2004 ರಲ್ಲಿ ಹೊರಡಿಸಲಾಗಿರುತ್ತದೆ.

## ಪರಿಕಲ್ಪನೆ

ಮಂಡಳಿಯ ಉದ್ದೇಶ ಕೊಳಚೆ ಪ್ರದೇಶದಲ್ಲಿ ವಾಸಿಸುವ ನಿವಾಸಿಗಳಿಗೆ ವಸತಿ ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸುವುದರ ಜೊತೆಗೆ ಐಇಸಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಅವರಲ್ಲಿ ಸಾಮಾಜಿಕ ಅರಿವು ಮೂಡಿಸಿ ಅವರ ಜೀವನ ಮಟ್ಟವನ್ನು ಹೆಚ್ಚಿಸುವುದಾಗಿದೆ.

# ಮಂಡಳಿ ರಚನೆ ಮತ್ತು ಕಾರ್ಯನಿರ್ವಹಣೆ

## ಮಂಡಳಿಯ ರಚನೆ

ಪರಿಚಯದಲ್ಲಿ ವಿವರಸಿರುವಂತೆ 1975 ಜುಲೈನಲ್ಲಿ ಮಂಡಳಿಯು ಅಸ್ತಿತ್ವಕ್ಕೆ ಬಂದಿರುತ್ತದೆ. ನಂತರ 2011ರಲ್ಲಿ ಮಂಡಳಿಯನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಾಗಿ ಮರು ನಾಮಕರಣ ಮಾಡಲಾಗಿದೆ. ಕಾಯಿದೆಯಂತೆ ಮಂಡಳಿಯು 5 ಅಧಿಕಾರೇತರ ಸದಸ್ಯರು ಮತ್ತು 8 ಅಧಿಕಾರಿ ಸದಸ್ಯರುಗಳನ್ನು ಹೊಂದಿರುತ್ತದೆ. ಅಧ್ಯಕ್ಷರು ಮುಖ್ಯಸ್ಥರಾಗಿರುತ್ತಾರೆ. ಆಯುಕ್ತರು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯಾಗಿದ್ದು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಕಾಯಿದೆಗೆ 2002 ರಲ್ಲಿ ಕೆಲವು ತಿದ್ದುಪಡಿಗಳನ್ನು ತಂದಿದ್ದು ಈ ಬಗ್ಗೆ ದಿನಾಂಕ:11-09-2002 ರಲ್ಲಿ ಸರ್ಕಾರಿ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಈ ಕಾಯಿದೆಗೆ ತಿದ್ದುಪಡಿ ನಿಯಮಗಳನ್ನು ರೂಪಿಸಿದ್ದು ಸರ್ಕಾರದ ಅಧಿಸೂಚನೆ ಸಂಖ್ಯೆ ವ.ಇ.102: ಎಸ್.ಬಿ.ಎಂ:2002 ದಿನಾಂಕ: 18-10-2004 ರಲ್ಲಿ ಹೊರಡಿಸಲಾಗಿರುತ್ತದೆ.

## ಕಾರ್ಯಕ್ರಮಗಳು :

1 ಕೊಳಚೆ ನಿವಾಸಿಗಳ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಅರಿಯಲು ಕೊಳಚೆ ಪ್ರದೇಶಗಳ ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆ ಕೈಗೊಳ್ಳುವುದು.

2 ಮಂಡಳಿಯು ನಡೆಸಿದ ಸಮೀಕ್ಷೆ ಪ್ರಕಾರ ರಾಜ್ಯದಲ್ಲಿ ಕೊಳಚೆ ಪ್ರದೇಶಗಳನ್ನು ಗುರುತಿಸಿ, ಅವುಗಳನ್ನು ಕಾಯ್ದೆಯಡಿ ಘೋಷಿಸುವುದು.

3 ಕೊಳಚೆ ಪ್ರದೇಶ ಪರಿಸರ ಸುಧಾರಣೆ ಮತ್ತು ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳುವುದು;

4 ಕೊಳಚೆ ನಿವಾಸಿಗಳು ಉತ್ತಮ ವಾತಾವರಣದಲ್ಲಿ ನೆಲೆಸುವಂತೆ ಮಾಡಲು ಅಗತ್ಯ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ಬೀದಿ ದೀಪ, ರಸ್ತೆ, ಚರಂಡಿ, ಸಾರ್ವಜನಿಕ ಶೌಚಗೃಹ ಮತ್ತು ಪ್ರವಾಹ ನೀರಿನ ಚರಂಡಿ ಹಾಗೂ ಸಮುದಾಯ ಭವನ ನಿರ್ಮಾಣ ಮಾಡುವುದು.

5 ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುಧಾನದಿಂದ ಮನೆಗಳನ್ನು ನಿರ್ಮಿಸಿ ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡುವುದು.

6 ಕೊಳಚೆ ನಿವಾಸಿಗಳ ಜೀವನ ಮಟ್ಟವನ್ನು ಸುಧಾರಿಸಲು ಸರ್ಕಾರದ ಚಾಲ್ತಿಯಲ್ಲಿರುವ ಯೋಜನೆಗಳನ್ನು ಉಪಯೋಗಿಸಿಕೊಂಡು ಕೌಶಲ್ಯ ಬಲವರ್ದನೆಗೆ ತರಬೇತಿ, ಆದಾಯ ವೃದ್ದಿ ತರಬೇತಿ ನೀಡುವುದು;

7 ಕೊಳಚೆ ನಿವಾಸಿಗಳ ಆರೋಗ್ಯ ಮತ್ತು ಶುಚಿತ್ವವನ್ನು ಕಾಪಾಡಲು ಸಾಮಾಜಿಕ ಅರಿವು ಮೂಡಿಸುವ ಐ.ಇ.ಸಿ. ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಐ.ಇ.ಸಿ. ಕಾರ್ಯಕ್ರಮದಡಿ ಸಿಬಿಓ/ ಎನ್.ಜಿ.ಓ.ಗಳ ನೆರವಿನೊಂದಿಗೆ ಸಾಮಾಜಿಕ ಅರಿವು ಮೂಡಿಸಿ, ಸಮುಧಾಯದ ಅಭಿವೃದ್ದಿಯನ್ನು ಮಾಡುವುದು.

8 ಸಿಬಿಓ/ಎನ್.ಜಿ.ಓ.ಗಳ ನೆರವಿನೊಂದಿಗೆ ಸಾಮಾಜಿಕ ಅರಿವು ಮೂಡಿಸಿ, ಸಮುಧಾಯದ ಅಭಿವೃದ್ದಿಯನ್ನು ಮಾಡುವುದು.

9 ಕೇಂದ್ರ ಪುರಸ್ಕೃತ ರಾಜೀವ್ ಅವಾಸ್ ಯೋಜನೆಯಡಿ ರಾಜ್ಯವನ್ನು “ಕೊಳಚೆ ಮುಕ್ತ” ರಾಜ್ಯವನ್ನಾಗಿ ಮಾಡುವ ಗುರಿ ಹೊಂದಲಾಗಿದೆ.

<u>**ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ತೆಗೆದುಕೊಳ್ಳಲಾದ ಯೋಜನೆಗಳು.**</u>

I. **ಮೂಲಭೂತ ಸೌಲಭ್ಯ ಒದಗಿಸುವುದು:-** ಘೋಷಿತ ಕೊಳಚೆ ಪ್ರದೇಶಗಳಲ್ಲಿ ಮಂಡಳಿ ವತಿಯಿಂದ ಮೂಲಭೂತ ಸೌಲಭ್ಯಗಳಾದ ಕುಡಿಯುವ ನೀರು, ಬೀದಿದೀಪ, ರಸ್ತೆ, ಚರಂಡಿ, ಸಾರ್ವಜನಿಕ ಶೌಚಾಲಯ ಮತ್ತು ಸಮುದಾಯ ಭವನ ನಿರ್ಮಾಣ ಮಾಡಲಾಗಿರುತ್ತದೆ.

**1) ಹುಡ್ಕೋ ಯೋಜನೆಯಡಿ ನಿರ್ಮಿಸಿರುವ ಮನೆಗಳ ವಿವರ:-** ಮಂಡಳಿ ವತಿಯಿಂದ ತುಮಕೂರು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಕಡು ಬಡವರಿಗೆ ಮನೆಗಳನ್ನು ಹುಡ್ಕೋ ಯೋಜನೆಯಡಿ ತುಮಕೂರು ಜಿಲ್ಲೆಯಲ್ಲಿ ಒಟ್ಟು 672 ಮನೆಗಳನ್ನು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 675 ಮನೆಗಳನ್ನು ಹುಡ್ಕೋ ಸಾಲದ ನೆರವಿನಿಂದ ಮನೆಗಳನ್ನು ನಿರ್ಮಿಸಲಾಗಿರುತ್ತದೆ. (ವಿವರ ಈ ಕೆಳಕಂಡಂತೆ ಇರುತ್ತದೆ.)

| **ಕ್ರಮ ಸಂಖ್ಯೆ** | **ನಗರ/ಪಟ್ಟಣ** | **ಕೊಳಚೆ ಪ್ರದೇಶದ ಹೆಸರು** | **ಒಟ್ಟು ನಿರ್ಮಿಸಿರುವ ಮನೆಗಳು** |
|---|---|---|---|
| **ತುಮಕೂರು ಜಿಲ್ಲೆ** | | | |
| 1 | ತುಮಕೂರು | ಹೆಗ್ಗಡೆ ಕಾಲೋನಿ ಹಂತ-1 | 192 |
| | | ಹೆಗ್ಗಡೆ ಕಾಲೋನಿ ಹಂತ-2 | 180 |
| 2 | ಮಧುಗಿರಿ | ಗುರುವಡೇರಹಳ್ಳಿ | 50 |
| | | ಹರಿಹರರೊಪ್ಪ | 50 |
| | | ಲಿಂಗನಾಯಕನಹಳ್ಳಿ | 100 |
| 3 | ಕೊರಟಗೆರೆ | ಸ.ನಂ 191/5ರಲ್ಲಿ | 50 |
| 4 | ಚಿಕ್ಕನಾಯಕನಹಳ್ಳಿ | ಸ.ನಂ 23/5 ರಲ್ಲಿ | 50 |
| | | **ಒಟ್ಟು** | **672** |
| **ಚಿಕ್ಕಬಳ್ಳಾಪುರ ಜಿಲ್ಲೆ** | | | |
| **1** | ಚಿಂತಾಮಣಿ | ವೆಂಕಟಗಿರಿ ಕೋಟೆ-1 | 68 |
| | | ವೆಂಕಟಗಿರಿ ಕೋಟೆ-2 | 63 |
| | | ಗಾಂಧಿ ನಗರ | 48 |
| | | ವೆಂಕಟಗಿರಿ ಕೋಟೆ ಎ.ಕೆ ಕಾಲೋನಿ | 40 |
| **2** | ಚಿಕ್ಕಬಳ್ಳಾಪುರ | ಬಾಪೂಜಿ ನಗರ | 64 |
| | | ಚಾಮರಾಜಪೇಟೆ | 122 |
| **3** | ಶಿಡ್ಲಘಟ್ಟ | ಕಾರ್ಮಿಕ ನಗರ-2 | 150 |
| **4** | ಗೌರಿಬಿದನೂರು | ದೇವರ ಹೊಸಹಳ್ಳಿ-1 | 90 |
| | | ದೇವರ ಹೊಸಹಳ್ಳಿ-2 | 30 |
| | | **ಒಟ್ಟು** | **675** |

**2) ವಾಂಬೆ ಯೋಜನೆಯಡಿ ನಿರ್ಮಿಸಿರುವ ಮನೆಗಳ ವಿವರ:-** ಮಂಡಳಿ ವತಿಯಿಂದ ತುಮಕೂರು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಘೋಷಿತ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಕಡು ಬಡವರಿಗೆ ಮನೆಗಳನ್ನು ವಾಂಬೆ ಯೋಜನೆಯಡಿ ತುಮಕೂರು ಜಿಲ್ಲೆಯಲ್ಲಿ ಒಟ್ಟು 389 ಮನೆಗಳನ್ನು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 187 ಮನೆಗಳನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರದ ಅನುದಾನದ ನೆರವಿನಿಂದ ಮನೆಗಳನ್ನು ನಿರ್ಮಿಸಲಾಗಿರುತ್ತದೆ. (ವಿವರ ಈ ಕೆಳಕಂಡಂತೆ ಇರುತ್ತದೆ.)

| ಕ್ರಮ ಸಂಖ್ಯೆ | ನಗರ/ಪಟ್ಟಣ | ಕೊಳಚೆ ಪ್ರದೇಶದ ಹೆಸರು | ಒಟ್ಟು ನಿರ್ಮಿಸಿರುವ ಮನೆಗಳು |
|---|---|---|---|
| **ತುಮಕೂರು ಜಿಲ್ಲೆ** | | | |
| 1 | ತುಮಕೂರು | ಹೆಗ್ಗಡೆ ಕಾಲೋನಿ | 24 |
| | | ಸಂತೇ ಮೈದಾನ | 35 |
| | | ಮರಳೂರು ಜನತಾ ಕಾಲೋನಿ | 93 |
| 2 | ಮಧುಗಿರಿ | ಬೆಂಕಿಪುರ | 23 |
| | | ಕಾರ್ಯಪ್ಪ ಬಡಾವಣೆ | 43 |
| | | ಭೋವಿ ಕಾಲೋನಿ | 06 |
| | | ತೆಂಗಿನಮರದ ಸಿಹಿ ನೀರು ಭಾವಿ ರಸ್ತೆ. | 06 |
| | | ಬೂರ್ಕನಹಟ್ಟಿ | 05 |
| | | ಕೆ.ಆರ್.ಎಸ್ ಬಡಾವಣೆ | 05 |
| | | ಕೊರಚರಹಟ್ಟಿ | 08 |
| | | ಮಾರಮ್ಮ ದೇವಸ್ಥಾನದ ಹತ್ತಿರ | 11 |
| | | ನಾಯಕನಹಟ್ಟಿ | 01 |
| | | ಕುಂಬಾರಹಟ್ಟಿ | 03 |
| 3 | ತುರುವೇಕೆರೆ | ದೇವೇಗೌಡ ಬಡಾವಣೆ | 36 |
| 4 | ಶಿರಾ | ಮುಸ್ಲಿಂ ಕಾಲೋನಿ | 40 |
| | | ಜ್ಯೋತಿ ನಗರ | 27 |
| | | ಲಾಡ್‌ಪುರ | 08 |
| | | ಭೋವಿಕಾಲೋನಿ | 05 |
| | | ಸಂತೇಪೇಟೆ | 10 |
| | **ಒಟ್ಟು** | | **389** |
| **ಚಿಕ್ಕಬಳ್ಳಾಪುರ ಜಿಲ್ಲೆ** | | | |
| **1** | ಚಿಂತಾಮಣಿ | ವೆಂಕಟಗಿರಿ ಕೋಟೆ | 28 |
| **2** | ಗೌರಿಬಿದನೂರು | ದೇವರಹೊಸಹಳ್ಳಿ | 84 |
| **3** | ಗುಡಿಬಂಡೆ | ಎ.ಡಿ.ಕಾಲೋನಿ | 29 |
| **4** | ಬಾಗೇಪಲ್ಲಿ | ಎ.ಕೆ. ಕಾಲೋನಿ | 46 |
| | **ಒಟ್ಟು** | | **187** |

## II . ಐ.ಹೆಚ್.ಎಸ್.ಡಿ.ಪಿ ಯೋಜನೆ:

1. **ತುಮಕೂರು ಜಿಲ್ಲೆ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆ ಆಯ್ದ 5 ಘೋಷಿತ ಕೊಳಚೆ ಪ್ರದೇಶದಲ್ಲಿ ಅರ್ಹ ಫಲಾನುಭವಿಗಳಿಗೆ ಐ.ಹೆಚ್.ಎಸ್.ಡಿ.ಪಿ ಯೋಜನೆಯಡಿಯಲ್ಲಿ ನಿರ್ಮಿಸಿ ಮನೆಗಳನ್ನು ಹಂಚಿಕೆ ಮಾಡಲಾಗಿರುತ್ತದೆ. (ವಿವರ ಈ ಕೆಳಕಂಡಂತಿದೆ.)**

| ಕ್ರ.ಸಂ | ಕಾಮಗಾರಿಯ ಹೆಸರು | ಮನೆಗಳ ಸಂಖ್ಯೆ. | ಷರಾ |
|---|---|---|---|
| 1 | ತುಮಕೂರು ಜಿಲ್ಲೆ ಶಿರಾ ನಗರದಲ್ಲಿ ಆಯ್ದ 5 ಕೊಳಚೆ ಪ್ರದೇಶದಲ್ಲಿ 682 ಮನೆಗಳ ನಿರ್ಮಾಣ ಕಾಮಗಾರಿ. | 682 | ಕಾಮಗಾರಿ ಪೂರ್ಣಗೊಂಡಿದೆ. |
| 2 | ತುಮಕೂರು ಜಿಲ್ಲೆ ಪಾವಗಡ ಪಟ್ಟಣ ಆಯ್ದ 4 ಕೊಳಚೆ ಪ್ರದೇಶದಲ್ಲಿ 508 ಮನೆಗಳ ನಿರ್ಮಾಣ ಕಾಮಗಾರಿ. | 508 | ಕಾಮಗಾರಿ ಪೂರ್ಣಗೊಂಡಿದೆ. |
| **3** | ಚಿಕ್ಕಬಳ್ಳಾಪುರ ಜಲ್ಲೆಯ ಚಿಂತಾಮಣಿ ತಾಲ್ಲೂಕಿನ ಘೋಷಿತ ಕೊಳಚೆ ಪ್ರದೇಶದಲ್ಲಿ 798 ಮನೆಗಳ ನಿರ್ಮಾಣ ಕಾಮಗಾರಿ. | **798** | ಕಾಮಗಾರಿ ಪೂರ್ಣಗೊಂಡಿದೆ. |
| **4** | ಚಿಕ್ಕಬಳ್ಳಾಪುರ ಜಲ್ಲೆಯ ಶಿಡ್ಲಘಟ್ಟ ತಾಲ್ಲೂಕಿನ ಘೋಷಿತ ಕೊಳಚೆ ಪ್ರದೇಶದಲ್ಲಿ 200 ಮನೆಗಳ ನಿರ್ಮಾಣ ಕಾಮಗಾರಿ | **200** | ಕಾಮಗಾರಿ ಪೂರ್ಣಗೊಂಡಿದೆ. |

## III. ರಾಜೀವ್ ಆವಾಸ್ ಯೋಜನೆ:

**1.** ತುಮಕೂರು ನಗರ ಸರ್ವೆ ನಂ, 4 ದಿಬ್ಬೂರು ಕೊಳಚೆ ಪ್ರದೇಶದಲ್ಲಿ ರಾಜೀವ್ ಆವಾಸ್ ಯೋಜನೆಯಡಿ (ರೇ) 1200 (ಜಿ+2) ಮನೆಗಳನ್ನು ನಿರ್ಮಿಸಲಾಗಿದ್ದು, ಅರ್ಹ ಫಲಾನುಭವಿಗಳಿಗೆ ಶೀಘ್ರದಲ್ಲಿ ಹಂಚಿಕೆ ಮಾಡಲಾಗುವುದು.
**2.** ತುಮಕೂರು ನಗರದ ಆಯ್ದ 5 ಕೊಳಚೆ ಪ್ರದೇಶದಲ್ಲಿ ರಾಜೀವ್ ಆವಾಸ್ ಯೋಜನೆಯಡಿ 1566 ಮನೆಗಳನ್ನು ನಿರ್ಮಿಸಲಾಗಿದ್ದು, ಅರ್ಹ ಫಲಾನುಭವಿಗಳಿಗೆ ಮನೆ ಹಂಚಿಕೆ ಮಾಡಲಾಗಿರುತ್ತದೆ.

# ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
## ತುಮಕೂರು ಉಪ-ವಿಭಾಗದ ವಿವರಗಳು.

**ಕಛೇರಿ ವಿಳಾಸ:**
ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ನಂ. 3ನೇ ಉಪ-ವಿಭಾಗ, ನಂಜಪ್ಪ ಲೇಔಟ್
ಅರಳಿಮರದ ಪಾಳ್ಯ ರಸ್ತೆ, ಶಿರಾಗೇಟ್.
ತುಮಕೂರು.
**ದೂರವಾಣಿ ಸಂಖ್ಯೆ:** 0816-2273380
**ಇ-ಮೇಲ್:** kscb.sd3tmk@gmail.com

**ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ನೌಕರರುಗಳ ವಿವರ (ಪದನಾಮ ಮೊಬೈಲ್ ಸಂಖ್ಯೆ ಮತ್ತು ಇತರೆ.)**

| ಕ್ರ.ಸಂ | ಹೆಸರು | ಪದನಾಮ | ಮೊಬೈಲ್ ಸಂಖ್ಯೆ |
|---|---|---|---|
| 1 | ಎಲ್.ಎ ಷಣ್ಮುಖಪ್ಪ | ಸಹಾಯಕ ಕಾರ್ಯಪಾಲಕ ಅಭಿಯಂತರರು | 9449040079 |
| 2 | ಪಿ. ಪ್ರಸನ್ನಕುಮಾರ್ | ಸಹಾಯಕ ಇಂಜಿನಿಯರ್ | 9901285163 |
| 3 | ಪಿ. ಶ್ರೀನಿವಾಸ್ | ಕಿರಿಯ ಇಂಜಿನಿಯರ್ | 9448661474 |
| 4 | ಜೆ.ಸಿ. ಅನಂತರಾಜು | ಪ್ರಥಮ ದರ್ಜೆ ಸಹಾಯಕರು | 9449022263 |
| 5 | ಟಿ.ಎನ್. ನರಸಿಂಹರಾಜು | ಪ್ರಥಮ ದರ್ಜೆ ಸಹಾಯಕರು | 9739887667 |
| 6 | ಡಿ.ಕೆ ಶಂಕರ್ | ದ್ವಿತೀಯ ದರ್ಜೆ ಸಹಾಯಕರು | 9481247122 |

# ಆಡಳಿತಾತ್ಮಕ ವ್ಯವಸ್ಥೆ
## ತುಮಕೂರು ಉಪ–ವಿಭಾಗದ ಚಾರ್ಟ್

